ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಸದಸ್ಯರ ಹೆಸರು | : | ಶ್ರೀ ಸಲೀಂ ಅಹಮದ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1807 |
| ಉತ್ತರಿಸುವ ಸಚಿವರು | : | ಮಾನ್ಯ ಕೈಮಗ್ಗ ಮತ್ತು ಜವಳಿ, ಸಕ್ಕರೆ ಹಾಗೂ ಕಬ್ಬು ಅಭಿವೃದ್ಧಿ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 15-03-2022 |

<table>
<tr><th>ಕ್ರಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ರಾಜ್ಯದಲ್ಲಿ ಕೈಮಗ್ಗ ಹೊಂದಿರುವ ಕುಟುಂಬಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)</td><td>2019-20 ನೇ ಸಾಲಿನ 4ನೇ ರಾಷ್ಟ್ರೀಯ ಕೈಮಗ್ಗ ಗಣತಿ ಪ್ರಕಾರ ರಾಜ್ಯದಲ್ಲಿ 25215 ಕೈಮಗ್ಗ ಕುಟುಂಬಗಳು ಇರುತ್ತವೆ.<br>ಜಿಲ್ಲಾವಾರು ಮಾಹಿತಿಯನ್ನು <u>ಅನುಬಂಧ</u>ದಲ್ಲಿ ಒದಗಿಸಿದೆ.</td></tr>
<tr><td>(ಆ)</td><td>ಧಾರವಾಡ, ಗದಗ ಮತ್ತು ಹಾವೇರಿ ಜಿಲ್ಲೆಗಳಲ್ಲಿ ಕೈಮಗ್ಗ ನಡೆಸುತ್ತಿರುವ ಕುಟುಂಬಗಳ ಸಂಖ್ಯೆ ಎಷ್ಟು;</td><td>ಧಾರವಾಡ, ಗದಗ ಮತ್ತು ಹಾವೇರಿ ಜಿಲ್ಲೆಗಳಲ್ಲಿ ಪ್ರಸ್ತುತ ಕೈಮಗ್ಗ ನಡೆಸುತ್ತಿರುವ ಕುಟುಂಬಗಳ ಸಂಖ್ಯೆ ವಿವರ ಈ ಕೆಳಕಂಡಂತಿರುತ್ತದೆ:-
<table>
<tr><th>ಕ್ರಸಂ</th><th>ಜಿಲ್ಲೆಯ ಹೆಸರು</th><th>ಪ್ರಸ್ತುತ ಕೈಮಗ್ಗ ನಡೆಸುತ್ತಿರುವ ಕಟುಂಬಗಳ ಸಂಖ್ಯೆ</th></tr>
<tr><td>1</td><td>ಧಾರವಾಡ</td><td>342</td></tr>
<tr><td>2</td><td>ಗದಗ</td><td>1371</td></tr>
<tr><td>3</td><td>ಹಾವೇರಿ</td><td>1551</td></tr>
<tr><td colspan="2">ಒಟ್ಟು</td><td>3264</td></tr>
</table>
</td></tr>
<tr><td>(ಇ)</td><td>ಈ ಕೈಮಗ್ಗಗಳನ್ನು ಹೊಂದಿರುವ ಕುಟುಂಬದವರಿಗೆ ಸರ್ಕಾರ ರೂಪಿಸಿರುವ ಸಹಾಯಕ ಯೋಜನೆಗಳು ಯಾವುವು;</td><td>ಕೈಮಗ್ಗ ನೇಕಾರರಿಗೆ ಸರ್ಕಾರವು ರೂಪಿಸಿರುವ ಯೋಜನೆಗಳ ವಿವರ ಈ ಕೆಳಕಂಡಂತಿರುತ್ತದೆ:-<br>• ನೇಕಾರ್ ಸಮ್ಮಾನ್ ಯೋಜನೆ<br>• ರಾಷ್ಟ್ರೀಯ ಕೈಮಗ್ಗ ದಿನಾಚರಣೆಯ ಆಚರಣೆಯಲ್ಲಿ ಕೈಮಗ್ಗ ನೇಕಾರರಿಗೆ ರಾಜ್ಯ ಮಟ್ಟದ ಪ್ರಶಸ್ತಿ<br>• ಕೈಮಗ್ಗ ಉತ್ಪನ್ನಗಳಿಗೆ ಶೇ.20 ರಿಬೇಟ್ ಮಾರುಕಟ್ಟೆ ಸಹಾಯ<br>• ಕೈಮಗ್ಗ ವಿಕಾಸ ಯೋಜನೆ<br>• ಕೈಮಗ್ಗಗಳಿಗೆ ಮೋಟರೈಸ್‌ಡ್ ಜಕಾರ್ಡ್ ಒದಗಿಸುವುದು<br>• ಕಚ್ಚಾ ನೂಲು ಖರೀದಿಗೆ ರೂ.15.00 ಪ್ರತಿ ಕೆ.ಜಿ ಗೆ ಸಹಾಯಧನ<br>• ಮೃತ ನೇಕಾರರ ಅಂತ್ಯ ಸಂಸ್ಕಾರ ವೆಚ್ಚ ಮರುಪಾವತಿ<br>• ಸಹಕಾರ ಸಂಘಗಳಿಗೆ ನಬಾರ್ಡ್ ಪುನರ್ ಧನದ ಬಡ್ಡಿ ಸಹಾಯಧನ ಹಾಗೂ ಶೇ.1 ಮತ್ತು ಶೇ.3 ರ ಬಡ್ಡಿ ಸಹಾಯಧನ<br>• ಏಳಿಗೆ ನಿಧಿ ಯೋಜನೆಯಡಿ ಸರ್ಕಾರದ ಸಮಚಂದಾ ಹಾಗೂ ಏಳಿಗೆ ನಿಧಿ ಮೇಲಿನ ಬಡ್ಡಿ<br>• ಉಣ್ಣೆ ವಲಯ ಪುನಃಶ್ಚೇತನ ಮತ್ತು ಬಲವರ್ಧನೆ ಯೋಜನೆಯಡಿ ಸಹಾಯಧನ<br>• ಜಿಲ್ಲಾ ವಲಯ ಯೋಜನೆಗಳು</td></tr>
</table>

| | | |
|---|---|---|
| (ಈ) | ಕೈಮಗ್ಗ ಹೊಂದಿರುವ ಕುಟುಂಬದವರಿಗೆ ಕಡಿಮೆ ಬಡ್ಡಿ ದರದಲ್ಲಿ ಬ್ಯಾಂಕ್ ಸಾಲ ನೀಡುವ ಪ್ರಸ್ತಾಪ ಸರ್ಕಾರದ ಮುಂದೆ ಇದೆಯೇ; ಇಲ್ಲದಿದ್ದಲ್ಲಿ ಕಾರಣಗಳೇನು? | ಕೈಮಗ್ಗ ಮತ್ತು ವಿದ್ಯುತ್ ಮಗ್ಗ ನೇಕಾರರಿಗೆ ಸಹಕಾರಿ ಬ್ಯಾಂಕ್‌ಗಳ ಮತ್ತು ಸಂಘಗಳ ಮೂಲಕ ಶೇಕಡ 1 ರ ಬಡ್ಡಿ ದರದಲ್ಲಿ ರೂ.2.00 ಲಕ್ಷಗಳವರೆಗೆ ಹಾಗೂ ಶೇ.3 ರ ಬಡ್ಡಿ ದರದಲ್ಲಿ ರೂ.2.00 ಲಕ್ಷಗಳಿಂದ ರೂ.5.00 ಲಕ್ಷಗಳವರೆಗೆ ಸಾಲ ಸೌಲಭ್ಯ ಒದಗಿಸಲಾಗುತ್ತಿದೆ. |

ಸಂ: CI 104 JAKE 2022

(ಶಂಕರ ಬ ಪಾಟೀಲ ಮುನೇನಕೊಪ್ಪ)
ಕೈಮಗ್ಗ ಮತ್ತು ಜವಳಿ, ಸಕ್ಕರೆ ಹಾಗೂ ಕಬ್ಬು ಅಭಿವೃದ್ಧಿ ಸಚಿವರು

## ಅನುಬಂಧ

ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಸಲೀಂ ಅಹಮದ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1807 ಕ್ಕೆ ಮಾಹಿತಿ

| 4ನೇ ರಾಷ್ಟ್ರೀಯ ಕೈಮಗ್ಗ ಗಣತಿ ಪ್ರಕಾರ ರಾಜ್ಯದಲ್ಲಿರುವ ಕೈಮಗ್ಗ ಕುಟುಂಬಗಳ ಸಂಖ್ಯೆ | | |
|---|---|---|
| ಕ್ರ.ಸಂ | ಜಿಲ್ಲೆಯ ಹೆಸರು | ಕೈಮಗ್ಗ ಕುಟುಂಬಗಳ ಸಂಖ್ಯೆ |
| 1 | ಬಾಗಲಕೋಟೆ | 6095 |
| 2 | ಬೆಂಗಳೂರು ನಗರ | 979 |
| 3 | ಬೆಂಗಳೂರು ಗ್ರಾಮಾಂತರ | 157 |
| 4 | ಬೆಳಗಾವಿ | 1197 |
| 5 | ಬಳ್ಳಾರಿ | 1126 |
| 6 | ಬೀದರ್ | 573 |
| 7 | ವಿಜಯಪುರ | 698 |
| 8 | ಚಾಮರಾಜನಗರ | 736 |
| 9 | ಚಿಕ್ಕಬಳ್ಳಾಪುರ | 814 |
| 10 | ಚಿಕ್ಕಮಗಳೂರು | 152 |
| 11 | ಚಿತ್ರದುರ್ಗ | 3049 |
| 12 | ದಕ್ಷಿಣಕನ್ನಡ | 34 |
| 13 | ದಾವಣಗೆರೆ | 92 |
| 14 | ಧಾರವಾಡ | 368 |
| 15 | ಗದಗ | 1425 |
| 16 | ಕಲಬುರಗಿ | 358 |
| 17 | ಹಾಸನ | 334 |
| 18 | ಹಾವೇರಿ | 1821 |
| 19 | ಕೊಡಗು | 30 |
| 20 | ಕೋಲಾರ | 99 |
| 21 | ಕೊಪ್ಪಳ | 879 |
| 22 | ಮಂಡ್ಯ | 54 |
| 23 | ಮೈಸೂರು | 10 |
| 24 | ರಾಯಚೂರು | 15 |
| 25 | ರಾಮನಗರ | 63 |
| 26 | ಶಿವಮೊಗ್ಗ | 14 |
| 27 | ತುಮಕೂರು | 3475 |
| 28 | ಉಡುಪಿ | 37 |
| 29 | ಉತ್ತರ ಕನ್ನಡ | 23 |
| 30 | ಯಾದಗಿರಿ | 508 |
| | ಒಟ್ಟು | 25215 |

ಅಪರ ನಿರ್ದೇಶಕರು
ಕೈಮಗ್ಗ ಮತ್ತು ಜವಳಿ